**ಓ ಎಸ್ ನಂಃ 278/2019**
**ಡಿ ಡಬ್ಲ್ಯೂ ಃ 1**

**ದಿಃ 13.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಕೆ ಎಲ್ ಎಸ್ ವಕೀಲರಿಂದಃ**

ದಾವಾ ಸ್ವತ್ತು ನಮ್ಮ ತಂದೆಗೆ ಮರಣ ಶಾಸನ ಪತ್ರದ ಮೂಲಕ ಬಂದಿರುತ್ತದೆ. ದಾವಾ ಸ್ವತ್ತು ಸುಮಾರು ವರ್ಷಗಳ ಕಾಲ ಅವರ ಸ್ವಾಧೀನಾನುಭವದಲ್ಲಿತ್ತು. ಈ ದಾವಾ ಸ್ವತ್ತಿನ ಕ್ರಯದ ಕರಾರು ಪತ್ರದ ವ್ಯವಹಾರದ ಮಧ್ಯವರ್ತಿಗಳು ಕೆಂಪಣ್ಣ. ನಿಪಿ 1 ರ ಕ್ರಯದ ಕರಾರು ಪತ್ರಕ್ಕೆ ಸಂಬಂಧಪಟ್ಟಂತೆ ತಾವು ವಾದಿಗಳ ಕಡೆಯಿಂದ ಎಷ್ಟು ಬಾರಿ ಹಣವನ್ನು ಪಡೆದಿದ್ದೀರಿ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿರುವುದಿಲ್ಲ. ನಿಪಿ 1 ರ ಕ್ರಯದ ಕರಾರು ಪತ್ರಕ್ಕೆ ತಮ್ಮ ತಂದೆ ಹಾಗೂ ಪ್ರತಿವಾದಿಗಳಾದ ನೀವೆಲ್ಲರೂ ಸೇರಿ ಸಹಿಯನ್ನು ಮಾಡಿದ್ದೀರಿ ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಕರಾರಿನ ಉಳಿಕೆ ಪ್ರತಿಫಲ ಎಷ್ಟು ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಕರಾರಿನ ಉಳಿಕೆ ಪ್ರತಿಫಲ ರೂ. 10 ಸಾವಿರ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಎಷ್ಟು ದಾವೆಗಳು ಇತ್ಯರ್ಥಕ್ಕೆ ಇದೆ ಎಂದರೆ ಸಾಕ್ಷಿ 2 ದಾವೆಗಳು ಇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ Power Grid Corporation ಅವರಿಂದ ರೂ. 15 ಲಕ್ಷ ಹಣವನ್ನು ಮೋಸದಿಂದ ತಾವು ಪಡೆದುಕೊಂಡಿದ್ದೀರಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಹಣ ವಾದಿಗಳಿಗೆ ಸೇರಬೇಕಾಗಿದ್ದು ಎಂದರೆ ಸಾಕ್ಷಿಯು ನಮ್ಮ ತಂದೆಯವರು ಜೀವಂತ ಇದ್ದ ಕಾಲದಲ್ಲಿ ಸದರಿ ಪರಿಹಾರವನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪರಿಹಾರ ಮೊತ್ತವನ್ನು ತಮ್ಮ ತಂದೆಯವರು ಮರಣ ಹೊಂದಿದ ನಂತರ ತಾವು ಪಡೆದಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಕರಾರು ಪತ್ರವನ್ನು ಹಾಗೂ ಅದೇ ದಿನ ವಾದಿಯ ಹೆಸರಿಗೆ ಸಾಮಾನ್ಯ ಮುಕ್ತರ್ ನಾಮೆಯನ್ನು ಸಹ ತಾವು ಬರೆದುಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ವಾದಿಯು ಜಿ ಪಿ ಎ ಆಧಾರದ ಮೇರೆಗೆ ದಾವಾ ಸ್ವತ್ತಿನ ಸ್ವಾಧೀನಾದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಿರ್ಮಾಣ ಮಾಡಿರುವ ಮನೆಯ ವಿಧ್ಯುತ್ ಮೀಟರ್ ಯಾರ ಹೆಸರಿಲ್ಲಿದೆ ಎಂದರೆ ಸಾಕ್ಷಿ ಇನ್ನೂ ವಿಧ್ಯುತ್ ಮೀಟರ್ ಅಳವಡಿಸಿಲ್ಲ ಎಂದು ನುಡಿಯುತ್ತಾರೆ. ನಾವು ವಾದಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಉಳಿಕೆ ಹಣವನ್ನು ನೀಡಿ ಕ್ರಯ ಪತ್ರವನ್ನು ಬರೆಸಿಕೊಳ್ಳುವಂತೆ ನೋಟಿಸ್ ನ್ನು

ಜಾರಿ ಮಾಡಿರುತ್ತೇವೆ. ಸದರಿ ವಿಚಾರವಾಗಿ ತಾವು ಆ ರೀತಿ ಯಾವುದೇ ನೋಟಿಸ್ ನ್ನು ವಾದಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ತಾವು ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೀರಿ ಹಣವನ್ನು ವಾದಿಗೆ ಹಿಂತಿರುಗಿಸಿದ್ದೀರಿ ಅಂತ ಯಾವ ದಿನಾಂಕದಂದು ವಾದಿಗೆ ಹಣವನ್ನು ಹಿಂತಿರುಗಿಸಿದ್ದೀರಿ ಎಂದರೆ ಸಾಕ್ಷಿ ನಮ್ಮ ತಂದೆಯವರು ಜೀವಿತಾವಧಿಯಲ್ಲಿ ಹಿಂತಿರುಗಿಸಿರಬಹುದು ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ತಮ್ಮ ಬಳಿ ಯಾವುದೇ ದಾಖಲಾತಿಗಳು ಇವೆ ಎಂದರೆ ಸಾಕ್ಷಿಯು ನಮ್ಮ ತಂದೆಯವರ ಬಳಿ ಇರಬಹುದು ಎಂದು ನುಡಿಯುತ್ತಾರೆ. ವಾದಿಗಳು ಕ್ರಯದ ಕರಾರು ಪತ್ರವನ್ನು ಕೊಡಲು ಅವರು ಶಕ್ತರಲ್ಲ ಎಂದು ತಮಗೇನಾದರೂ ನೋಟಿಸ್ ಜಾರಿ ಮಾಡಿದ್ದಾರ ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**